ಶ್ರೀ ನರಸಿಂಹಯ್ಯನವರಿಗೆ
ಮಾನಪತ್ರ ಸಮರ್ಪಣೆ

ರಾಜಧಾನಿಯ ಸುಪ್ರಸಿದ್ಧ ವಕೀಲರಾದ ಶ್ರೀಮತ್ ಸಿ. ನರಸಿಂಹಯ್ಯನವರು ಸ್ಥಳೀಯ ಹೊಯ್ಸಳ ಕರ್ನಾಟಕ ಸಭೆಗೆ ರೂ ೨೦೦೦ ಬೆಲೆ ಬಾಳುವ ಕಟ್ಟಡವೊಂದನ್ನು ಉದಾರಾದಾನ ಮಾಡಿರುವ ಸಲುವಾಗಿ ಮತ್ತು ಅವರು ಮಾಡಿರುವ ಜನಸೇವೆಯನ್ನು ಅಭಿನಂದಿಸುವ ದಕ್ಕಾಗಿ ಸ್ಥಳೀಯ ಹೊಯ್ಸಳ ಕರ್ನಾಟಕ ಸಂಘದವರು ಮುಂದಿನ ಮಾಹೆ ೫ ರಲ್ಲಿ ಏರ್ಪಾಡಿನಿಂದ ಶ್ರೀಯುತರಿಗೆ ಮಾನಪತ್ರ ಸಮರ್ಪಣೆ ಮಾಡುವುದಾಗಿ ತಿಳಿಯಬಂದಿದೆ.

ಭಾಷಣ

ವಾಣೀವಿಲಾಸ ರಸ್ತೆಯಲ್ಲಿರುವ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ನಾಳೆಯ ದಿನದ ಸಂಜೆ 6 ಘಂಟೆಗೆ ಪತ್ರಿಕೋದ್ಯೋಗಿಗಳು ಮತ್ತು ಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ ಮುದುವೇಡು ಕೃಷ್ಣರಾಯರು ಭಾಷಣ ಮಾಡುತ್ತಾರೆ.

ಬಟ್ಟೆ ವ್ಯಾಪಾರಿ ಸಂಘ

ಈ ಸಾಲಿಗೆ ಬಟ್ಟೆ ವ್ಯಾಪಾರಿ ಸಂಘದ ಅಧ್ಯಕ್ಷರನ್ನಾಗಿ ಶ್ರೀ ಚಾಮುಂಡೇಶ್ವರಿ ಹಾಲಿನ ಮಾಲೀಕರಾದ ಶ್ರೀ ಆರ್. ಎಸ್. ವೇಣುಗೋಪಾಲರನ್ನೂ, ಉಪಾಧ್ಯಕ್ಷರನ್ನಾಗಿ ಶ್ರೀ ಪಿ ಎಸ್. ರಾಜಾರಾಯರನ್ನೂ, ಗೌರವ ಕಾರ್ಯದರ್ಶಿಗಳಾಗಿ ಶ್ರೀ ಕೆ.ಜಿ ರಂಗಸ್ವಾಮಿಯಂಗಾರರನ್ನೂ ಜಂಟಿ ಕಾರ್ಯದರ್ಶಿಗಳಾಗಿ ಶ್ರೀ ಕೆ.ಎ. ಎಂ. ಹಾಜೀಯವರನ್ನೂ ಮತ್ತು ಖಜಾಂಚಿಗಳಾಗಿ ಶ್ರೀ ಹಾಸೀಂ ಮಹಮದ್ ಸೇಟ್ ಆ್ಯಂಡ್ ಸನ್ಸ್‌ರವರನ್ನು ಚುನಾಯಿಸಲಾಗಿದೆ

ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ

ಪ್ರಸಿದ್ಧ ಸಾಹಿತಿಗಳಾದ ಶ್ರೀ ಮುದುವೇಡು ಕೃಷ್ಣರಾಯರನ್ನು ಸ್ಥಳೀಯ ಪತ್ರಿಕೋದ್ಯೋಗಿ ಸಂಘದವರು ಈ ದಿನ ಬೆಳಿಗ್ಗೆ ಸತ್ಕರಿಸಿದರು. ವೀರಕೇಸರಿ ಸೀತಾರಾಮಶಾಸ್ತ್ರಿಗಳು ಮತ್ತು ಹಾಸದವ ಇಬ್ಬರು ಪತ್ರಿಕೋದ್ಯೋಗಿಗಳು ಬಂದಿದ್ದರು ಶ್ರೀಮತಿ ಅಗರಂರವರು ಅತಿಥಿಗಳನ್ನು ಸ್ವಾಗತಿಸಿ ಸಭಿಕರಿಗೆ ಪರಿಚಯಮಾಡಿಸಿದರು. ಶ್ರೀ ಅಗರಂರವರ ಭಾಷಣವಾದನಂತರ ಶ್ರೀ ಮುದುವೇಡುರವರು ಕನ್ನಡ ಪತ್ರಿಕಾ ಕಾರ್ಯಕಾರರು ಕನ್ನಡ ಭಾಷೆಗೆ ಸಲ್ಲಿಸಬೇಕಾಗಿರುವ ಸೇವೆಯನ್ನು ಕುರಿತು ವಿವರಿಸಿದರು. ಕಾರ್ಯದರ್ಶಿ ಶ್ರೀ ಕುಮಾರಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ಸಭೆ ಮುಕ್ತಾಯವಾಯಿತು.

'SATYAVADI" Founded 1917 Regd. No. M. 1239

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು.)

ಸಂಪುಟ 29 ಸಂಚಿಕೆ 24] ಶುಕ್ರವಾರ 26—10—45 [ಬಿಡಿ ಪ್ರತಿ 3 ಪೈ

ಫ್ರಿಸ್ಕೊ ಸಮ್ಮೇಳನದಲ್ಲಿ ರಷ್ಯಾ ಡೆಲಿಗೇಷನ್ನಿನ ಒಬ್ಬ ಮೆಂಬರ್ ರೊಡಿಯೊನೌ

ಆಗ್ನೇಯ ಏಷ್ಯಾ ದಿನಾಚರಣೆ

ಸ್ವಂ. ಸು.] [ತಾ 25

ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸಿನ ಆಶ್ರಯದಲ್ಲಿ ಕಾಂಗ್ರೆಸ್ ಕಛೇರಿಯು ಭವನದಲ್ಲಿ ಆಗ್ನೇಯ ಏಷ್ಯಾ ದಿನಾಚರಣೆ ಸಂಬಂಧವಾಗಿ ಇದೇ 28 ನೇ ತಾರೀಖು ಸಂಜೆ 6 ಘಂಟೆಯಲ್ಲಿ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಭಾಷಣ ಮಾಡುವರು.

ಸ್ವೀಕಾರ

ಮೈಸೂರು ರಂಗೇಬೀದಿಯಲ್ಲಿರುವ ಪ್ರಸಿದ್ಧ ಸರಾಪು ಮತ್ತು ಔಷಧಿ ವ್ಯಾಪಾರಿಗಳಾದ ಮೆಸರ್ಸ್ ಕಾಂತರಾಜ್ ಕಂಪೆನಿಯವರು ಕಳುಹಿಸಿಕೊಟ್ಟಿರುವ ಪಾಕೆಟ್ ಕ್ಯಾಲೆಂಡರನ್ನು ಅವರಿಂದ ಸ್ವೀಕಾರ ಮಾಡಿದ್ದೇವೆ.

ಪ್ಯಾಲಿಸ್ಟೈನ್ ದಿನಾಚರಣೆ

ಭಾರತದಲ್ಲಿಯೂ ನವೆಂಬರ್ 2 ರಲ್ಲಿ ಪ್ಯಾಲಿಸ್ಟೈನ್ ದಿನಾಚರಣೆ ನಡಸಬೇಕೆಂಬುದಾಗಿ ಮಿ || ಜಿನ್ನಾರವರಿಗೆ ಪ್ಯಾಲಿಸ್ಟೈನಿನಿಂದ ಕೋರಿಕೆ ಮುಟ್ಟಿದೆ.

ಜೈಪುರ ಮಹಾರಾಜರು ಏರ್ಪಡಿಸಿದ್ದ ಔತಣಕೂಟಕ್ಕೆ ಪಂಡಿತ ಜವಾಹರಲಾಲರು ಆಹ್ವಾನಿಸಿಲ್ಪಟ್ಟಿದ್ದರು.

ಎಕ್ಸರೇ ಸಂಶೋಧನೆಯ ಅರ್ಧ ಶತಮಾನ ಮಹೋತ್ಸವವನ್ನು ಬ್ರಿಟೀಷ್ ರಾಯಲ್ ಸಂಘ ಜರುಗಿಸುವುದು.

ಸರ್ ಆರ್ಚರ್ ಡೈವರಿಯವರನ್ನು ಬಿಹಾರ್ ಮತ್ತು ವಿಧ್ಯಪ್ರಾಂತದ ಗೌರ್ನರಾಗಿ ನೇಮಿಸಲಾಗುವುದಂತೆ.

ಜಪಾನ್ ಪತ್ರಿಕೆಗಳು ಸ್ವತಂತ್ರವಾಗಿ ನಡೆಯಬೇಕೆಂದು ಜನರಲ್ ಮೆಕ್ಆರ್ಥರ್ ಆಜ್ಞೆಯಿತ್ತಿದ್ದಾರೆ.

ವಿವಿಧ ವರ್ತಮಾನ

ಸಿಯಾಕ್ ಕೇಂದ್ರ— ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್ನರು ಚಿಯಾಂಗ್ ಕೈಷೇಕರಿಗೆ ಚೀನಾ ರಾಷ್ಟ್ರೀಯ ದಿನಾಚರಣೆಯ ಉತ್ಸವಾರ್ಥವಾಗಿ ಸಂದೇಶ ಕಳಿಸಿದ್ದಾರೆ— 'ಈ ಉತ್ಸವ ಕಾಲದಲ್ಲಿ ಕಳೆದ ವರ್ಷ ನಾನು ಸಂದೇಶ ಕಳಿಸುವಾಗ 1945 ರಲ್ಲಿ ಈ ಮಹೋತ್ಸವವು ವೈಭವದಿಂದ ನಡೆಯುತ್ತದೆ ಎಂದು ಭವಿಷ್ಯ ನುಡಿದಿದ್ದೆ. ಆ ಮಾತು ಈಗ ಸತ್ಯವಾಗಿದೆ. ಇನ್ನು ಮುಂದೆಯೂ ಯುದ್ಧಕಾಲದಲ್ಲಿ ನಿಮ್ಮ ದೇಶ ಹೇಗೆ ಯಶಸ್ವಿಯಾಗಿ ಸಾಗಿತೋ ಹಾಗೆಯೇ ಶಾಂತಿ ಕಾಲದಲ್ಲೂ ಏಳಿಗೆ ಹೊಂದುತ್ತದೆಂಬ ನಂಬಿಕೆ ನನಗಿದೆ.'

ಡಮಾಸ್ಕಸ್— ಮಧ್ಯಪ್ರಾಚ್ಯದಲ್ಲಿ 4 ವರ್ಷವಿದ್ದು, 31 ನೇ ಭಾ. ದಳ ಹಿಂದಿರುಗುತ್ತ ಸಿರಿಯಾದಿಂದ 2500 ಮೈಲಿ ನಡೆದುಕೊಂಡುಬಂದಿದೆ. ಜಹಜು ಸಿಕ್ಕದಿದ್ದುದರಿಂದ ದಳವು ಹೀಗೆ ನಡೆಯಬೇಕಾಯಿತು. ಇದು ಒಂದು ತಿಂಗಳಲ್ಲಿ ಭಾರತಕ್ಕೆ ಬರುತ್ತದೆ. (ಐ. ಪಿ.)

ಅಣುಬಾಂಬಿನ ರಹಸ್ಯವು ಎಲ್ಲಾ ರಾಷ್ಟ್ರಗಳಿಗೂ ಗೊತ್ತಾಗಬೇಕೆಂದೂ ಅಣುಬಾಂಬಿನ ವಿರುದ್ಧ ಬೇರೊಂದು ಬಾಂಬಿನ ತಯಾರಿಕೆಯಾಗಿರುವುದೆಂಬುದು ಹುಚ್ಚುತನವೆಂದೂ ಅಣುಬಾಂಬಿನ ತಯಾರಿಕೆಯಲ್ಲಿ ಸಹವರ್ತಿಸಿದ್ದ ಬ್ರಿಟಿಷ್ ವೈಜ್ಞಾನಿಕರ ಹೇಳಿಕೆಯಾಗಿದೆ.

ಬೊಂಬಾಯಿ ನಗರ ಮುಸ್ಲಿಂ ಚುನಾವಣೆ ಕ್ಷೇತ್ರದಿಂದ ಮಿ || ಹುಸೇನ್ ಭಾಯ್ ಲಾಲ್ಜಿಯವರು ಕೇಂದ್ರ ಅಸೆಂಬ್ಲಿ ಚುನಾವಣೆಗೆ ಮಿ || ಜಿನ್ನಾರವರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲುವರು.

ಬರ್ಮಾದ ದಟ್ಟವಾದ ಕಾಡುಗಳಲ್ಲಿ ಮಿತ್ರರಿಗಾಗಿ ಯುದ್ಧ ಮಾಡಿದ ಸಿಪಾಯಿಗಳಿಗೆ ಮಿತ್ರವಿಮಾನಗಳ ಮೂಲಕ ಹಣವೊದಗುತ್ತಿದೆ. ಈ ಜನ ಒಟ್ಟು 16879 ಜಪಾನಿಗಳನ್ನು ಹತಮಾಡಿದರು.

ಪ್ರಪಂಚ ಸಂಯುಕ್ತ ಸಂಸ್ಥೆ ಸ್ಥಾಪನೆಗೆ 29 ರಾಷ್ಟ್ರಗಳು ರುಜುವಾಗಿದೆಯಾ ಇನ್ನು ಅದು ರೂಪುಗೊಂಡಂತಾಯಿತು.

ಇಂಡಿಯನ್ ನ್ಯಾಷನಲ್ ಆರ್ಮಿ ಸಂಬಂಧದ ವಿಚಾರಣೆಯು ಸುಮಾರು 6 ತಿಂಗಳು ನಡೆಯಬಹುದೆಂದು ಹೇಳಲಾಗಿದೆ.

ಸಾಮ್ರಾಜ್ಯಗಳ ಪರೀಕ್ಷೆಯ ಕಾಲ

ಪ್ರಪಂಚದ ಎರಡನೇ ಮಹಾಯುದ್ಧವು ಮುಗಿದಿದೆ ಪ್ರಪಂಚದ ಮಾನವನ ನಾಲ್ಕು ವಿಧ ಸ್ವಾತಂತ್ರ್ಯಗಳಿಗಾಗಿ ಈ ಯುದ್ಧವು ಹೋರಾಡಲ್ಪಡುತ್ತಿದೆಂದು ಆಗಿನ ಅಧ್ಯಕ್ಷ ರೂಸ್ವೆಲ್ಟರು ಸಾರಿದರು. ಮಾನವರಲ್ಲನೇಕರು ಈ ಸಾರುವಿಕೆಯನ್ನು ನಂಬಿದರು. ಹಾಗೆ ನಂಬಿದ ಜನರು ಜರ್ಮನಿ ಮತ್ತು ಜಪಾನು ವಿರುದ್ಧ ತಮ್ಮ ದೇಶಗಳಲ್ಲಿ ಗತ್ತಿನ ಯುದ್ಧವನ್ನು ಪ್ರಾರಂಭಿಸಿ ಅವುಗಳನ್ನು ಹಣ್ಣಿಗೆ ತಂದರು. ಜಪಾನು ಜರ್ಮನಿಗಳು ಅನೇಕ ಸಾಮ್ರಾಜ್ಯಗಳನ್ನು ಮಣ್ಣು ಮುಕ್ಕಿಸಿದ್ದರು. ಹಾಲೆಂಡು ಫ್ರಾನ್ಸುಗಳನ್ನು ರಸಾತಳಕ್ಕೆ ತಂದಿದ್ದವು ಇಂಗ್ಲೆಂಡನ್ನು ೩ ನೇ ತರಗತಿಯ ರಾಷ್ಟ್ರವನ್ನಾಗಿ ಮಾಡಿದವು. ಕಡೆಗೆ ಅವೆ ರಿಕಾ ಮತ್ತು ರಶಿಯಾಗಳು ಈ ಅಕ್ಷ ರಾಷ್ಟ್ರಗಳನ್ನು ಮಟ್ಟು ಹಾಕಿದನಂತರ ಈ ಮೂರು ಸಾಮ್ರಾಜ್ಯಗಳು ತಿರುಗಿ ತಲೆಯೆತ್ತಿ ತನ್ನು ಆಂಕಿತ ದೇಶಗಳನ್ನು ತಿರುಗಿ ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಲಿವೆ. ಹಾಗೆ ಪ್ರಯತ್ನ ಮಾಡಿ ಫ್ರಾನ್ಸು ತನ್ನ ಸಾಮ್ರಾಜ್ಯವನ್ನು ಸಿರಿಯಾ ಮತ್ತು ಲೆಬ್ನಾನ್‌ಗಳಲ್ಲಿ ಸ್ಥಾಪಿಸಿಕೊಳ್ಳಲು ನೋಡಿತು ಆದರೆ ಈ ಎರಡು ದೇಶಗಳಿಗೆ ಅಬಿಸೀನಿಯಾ ಲೀಗು ಬೆಂಬಲ ಬಂದದ್ದಿರಿಂದ ಫ್ರಾನ್ಸಿನ ಈ ಮನೋರಥವು ಭಗ್ನವಾಯಿತು. ಹಾಗೆ ಭಗ್ನವಾದನಂತರ ಫ್ರಾನ್ಸು ಇಂಡೋಚೀನಾದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟಿತು. ಆದರೆ ಅಲ್ಲಿಯ ಜನರಿಗೆ ಜಪಾನು ಸ್ವಾತಂತ್ರ್ಯದ ಮಂತ್ರವನ್ನು ಉಪದೇಶಿಸಿ ಅವರಿಗೆ ಆಯುಧಗಳನ್ನೊದಗಿಸಿ ಕೊಟ್ಟಿದ್ದರಿಂದ ಅವರು ಫ್ರಾನ್ಸಿನ ಪ್ರಯತ್ನಕ್ಕೆ ವಿರೋಧವಾಗಿ ನಿಂತು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಈಗ ಹೋರಾಡುತ್ತಲಿರುವರು. ಫ್ರಾನ್ಸಿನಂತೆ ಹೇಳಹೆಸರಿಲ್ಲದೆ ಹೋಗಿದ್ದ ಪುಟ್ಟ ಹಾಲೆಂಡು ದೇಶವು ಕೂಡ ಈಗ ತಿರುಗಿ ತನ್ನ ಸಾಮ್ರಾಜ್ಯವನ್ನು ಇಂಡೋನೇಷಿಯಾದಲ್ಲಿ ಸ್ಥಾಪಿಸಲು ಹೊರಟಿರುತ್ತದೆ ಜಾವಾ ಮುಂತಾದವುಗಳಲ್ಲಿ ರಾಷ್ಟ್ರೀಯತ್ವವು ಪ್ರಬಲಿಸಿ ಹಾಲೆಂಡಿನ ಈ ಪ್ರಯತ್ನಕ್ಕೆ ಮುಟ್ಟುಗೋಲು ಹಾಕಲಿಕ್ಕೆ ಪ್ರಯತ್ನಿಸುತ್ತಲಿದೆ. ಈ ರಾಷ್ಟ್ರಗಳ ರಾಷ್ಟ್ರೀಯತ್ವವು ಪ್ರಬಲಿಸಿ ಅಲ್ಲಿ ಫ್ರೆಂಚ್ ಮತ್ತು ಹಾಲೆಂಡು ಸಾಮ್ರಾಜ್ಯಗಳು ನಾಶವಾದರೆ ಇಂಡಿಯಾ ಬರ್ಮಾ ಸಿಲೋನು ಮಲೆಯು ಮುಂತಾದವುಗಳಲ್ಲಿ ತಾನು ನೆಲೆಸಿ ಸಾಮ್ರಾಜ್ಯವದಗಿ ಬಾಳಲಿಕ್ಕೆ ಎಲ್ಲಿ ಸುಹುಕಾರ ಬರುತ್ತದೋ ಎಂದು ಇಂಗ್ಲೆಂಡು ತಿಳಿದುಕೊಂಡು ಆ ದೇಶಗಳಲ್ಲಿ ಜಪಾನರ ಶರಣಾಗತಿಯನ್ನು ಸ್ವೀಕರಿಸಲಿಕ್ಕೆ ತನ್ನ ಸೈನ್ಯವನ್ನು ಅಲ್ಲಿ ಶಾಂತಿಸ್ಥಾಪನೆ ಮಾಡಲಾಗುತ್ತದೆಂದು ಹೇಳುತ್ತ ಇಂಗ್ಲೆಂಡು ತನ್ನ ಸೈನ್ಯವನ್ನು ಒಂದೇ ಅಲ್ಲದೆ ಹಿಂದೀ ಸೈನ್ಯವನ್ನೂ ಕೂಡ ಅಲ್ಲಿಯ ರಾಷ್ಟ್ರೀಯವಾದಿಗಳ ವಿರುದ್ಧವಾಗಿ ಉಪಯೋಗಿಸುವುದು ಕೇವಲ ಅನುಚಿತವಾಗಿರುವುದು ಈಗ 200 ವರ್ಷಗಳಿಂದ ಇಂಗ್ಲೆಂಡಿನ ಕೃತಿಯು ಇದೇ ರೀತಿ ಮಾನವನ ಸ್ವಾತಂತ್ರ್ಯಾಪಹರಣದಲ್ಲಿ ತೊಡಗಿರುವುದು ಇದಕ್ಕಾಗಿ ಅದಕ್ಕೆ ಪ್ರತೀಕಾರ ದೇವತೆಯು ಕಾದುಕೊಂಡು ಕುಳಿತಂತೆ ತೋರುತ್ತದೆ. [ಮುಂದುವರಿಯುವುದು

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.



ಆಮಶಂಕೆ
ಅತಿಸಾರಗಳಿಗೆ
.... ಖಾತ್ರಿ ....
ಗುಣಕಾರಿಯಾದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುಪನರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT Opera—
3 rd Week
ರಂಜಿತ್, ಟಿ. ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ
ಶಾಲಿವಾಹನ
Morning Shows
From 26-10-45
In Old California

At Ranjit
Humayun
7 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂನ್....
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಸ್
ಪಾತ್ರವಹಿಸಿರುವರು

ನಮ್ಮ ಆರೋಗ್ಯ ಆನಂದದಾಯಕ



ಜೀವಿತಕ್ಕೆ
ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಕಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಟಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.